Reg No M. 1299 Sri 24—9—52

36 ನೇ ವರ್ಷ — 36 th Year

ಸತ್ಯವಾದಿ

SATYAVADI

ಬಿಡಿಪ್ರತಿ 3 ಪೈ| ಸ್ಥಾಪಕರು : ಅರಮನೆ ಸಂಸ್ಮೇದಾರ್ ಎಂ ವಿ ಸುಬ್ಬಾಯರು

ತಿರುವಾಂಕೂರು – ಕೊಚ್ಚಿ ಕಾಂಗ್ರೆಸ್ ಪಾರ್ಟಿಗೆ ಬಿಕ್ಕಟ್ಟು

ರ. ಬಿ.

ಭಾರತ ಕಾಂಗ್ರೆಸ್ ಸಮಿತಿ ಅಧಿವೇಶನಕ್ಕೆ ಇಂದೂರಿಗೆ ತೆರಳಿದ್ದ ತಿರುವಾಂಕೂರು ಕೊಚ್ಚಿಯ ಮೂವರು ಮಂತ್ರಿಗಳು ಮತ್ತು ಅವರ ಬೆಂಬಲಿಗರ ವಿರುದ್ಧ ಕಾಂಗ್ರೆಸ್ ಪಾರ್ಟಿಯಲ್ಲಿ ಶಿಸ್ತಿನ ಕ್ರಮ ಜರುಗಿಸುವ ಪ್ರಾರಂಭವಾಗಿದೆ. ಪಾರ್ಟಿಯ ಪ್ರಾಥಮಿಕ ಸದಸ್ಯತ್ವದಲ್ಲಿ ಅಕ್ಕ ಗಿರಣಿ ಲೈಸನ್ಸು, ಕೊಡಿಸುವ ವಿಷಯದಲ್ಲಿ ಅಂಬೇಡ್ಕರ್, ಅರಮನೆ ಗಾರ್ಡುಗಳಿಗೆ ಉನ್ನತ ಕೆಲಸ ಕೊಡುವ ವಿಷಯ ಇವೇ ಬಿಕ್ಕಟ್ಟಿಗೆ ಕಾರಣ

ಂ ಂ

ಅಮೇನಿಯಾದಲ್ಲಿ ಟೈಪ್‌ರೈಟರ್ ಇಟ್ಟುಕೊಳ್ಳಬೇಕಾದರೆ ಸರ್ಕಾರದ ಲೈಸನ್ಸು ಪಡೆಯಬೇಕು.

ಂ ಂ

ಹಿಂದೂ ಮಹಾಸಭೆ ಕಾರ್ಯದರ್ಶಿ ಶ್ರೀ ವಿ. ಜಿ ದೇಶಪಾಂಡೆಯವರು ಹೇಳಿಕೆ ಇತ್ತು ಭಾರತದಲ್ಲಿರುವ 4 ಕೋಟಿ ಮಹಮದೀಯರು ತಮಗೆ ರಕ್ಷಣೆ ಸಿಗಬೇಕಾದರೆ ಹಿಂದೂಗಳನ್ನ ಮೆಲಂಬಿಸಬೇಕೆಂದಿರುವರು.

ಂ ಂ

ಮೊನೆ ಬೆಳಗ್ಗೆ ಹಿರಿಯೂರಿನಲ್ಲಿ ಮಹಿಳೆಯೊರ್ವಳು ಬಸ್ಸಿನಲ್ಲಿ ಬರುತ್ತಿರುವಾಗಲೇ ಶಿಶು ಜನನವಾಯಿತು.

ಂ ಂ

ದಸರಾ ವಸ್ತುಪ್ರದರ್ಶನವನ್ನು ಹೆಚ್ಚು ಆಕರ್ಷಕವಾಗಿ ಮಾಡಲು ಉತ್ತಮ ಸಲಹೆ ಕೊಡುವವರಿಗೆ ಬಹುಮಾನ ನೀಡಲು ದಸರಾ ವಸ್ತುಪ್ರದರ್ಶನ ಸಮಿತಿ ನಿರ್ಧರಿಸಿದೆ.

ಂ ಂ

ಈ ದಿವಸ ಸಂಜೆ ಮೈಸೂರು ಟೌನ್ ಹಾಲಿನಲ್ಲಿ ವಿದ್ಯುತ್ಪಾರಿತೋಷಕ ಸಮಾರಂಭ ನಡೆಯುವದು.

ಂ ಂ

ಟೆಹರಾನಿನ ಪ್ರತಿನಿಧಿ ಇಂಗ್ಲೀಷ್ ಪತ್ರಿಕೆ ಸಂಪಾದಕರು ಟೆಹರಾನಿಗೆ ಭೇಟಿ ಕೊಡಲು ನಿರಾಕರಿಸಿದ್ದಾರೆ.

ಂ ಂ

ವಾಫ್ಡ ಪಕ್ಷದ ನಾಯಕತ್ವ ಬಿಡಬೇಕೆಂದು 70 ವರ್ಷದ ನಹಾಸಪಾಷರ ಮೇಲೆ ಈಜಿಪ್ಟ್ ಸರ್ಕಾರ ಆಜ್ಞೆ ಮಾಡಿದೆ. ನಹಾಸರಿಲ್ಲದೆ ವಾಫ್ಡ ಪಕ್ಷ ಇಲ್ಲವೆಂದು ಅಲ್ ಮಿಸ್ರ್ ವಂದಿ ಮಾಡಿದೆ.

ಂ ಂ

ವಂದರಾಸು ಪೇಟೆಯಲ್ಲಿ ಅಕ್ಕಿ ಧಾರಣೆ ಮಿತಿಮೀರಿ ಹೆಚ್ಚಿದ್ದರಿಂದ ಹತ್ತು ದಿವಸಗಳಲ್ಲಿ 2 ಸಾವಿರ ವಂದಿಗೆ 2 ಸಹಸ್ರ ಕಾರ್ಡುಗಳನ್ನು ಹಂಚಲಾಗಿದೆ.

ನೇತಾಜಿ

ನೇತಾಜಿ ಸುಭಾಷ ಚಂದ್ರಬೋಸರವರು ಜೀವಂತರಾಗಿರುವರು, ನೇಪಾಳ ಮೂಲಕವಾಗಿ ಭಾರತಕ್ಕೆ ಬರಲು ಅವರು ತೀವ್ರ ಪ್ರಯತ್ನ ಮಾಡುತ್ತಿರುವರು ಈ ವಿಷಯವನ್ನು ಪಾಕೀಸ್ತಾನಕ್ಕೆ ಸಿಂಗಪುರದಿಂದ ಇದೇತಾನೆ ಮಂಳಿದ ಕರೀಂಗಿನಿ ತಿಳಿಸಿರುವರು

ಸುಭಾಷರು ಮತ್ತು ಅವರು ಪಂಚ ಮಿತ್ರರು

ತಮ್ಮ ಭೂದಾನ ಚಳವಳಿಗೆ 5 ಕೋಟಿ ಎಕರೆ ಭೂಮಿ ಕಾಣಿಕೆ ದೊರೆಯುವ ಸಂಭವ ತಮಗಿದೆಯೆಂದು ಆಚಾರ್ಯ ವಿನೋಬ ಭಾವೆ ಅಂಬಾಲದಲ್ಲಿ ತಿಳಿಸಿದ್ದಾರೆ

ಂ ಂ

ದಕ್ಷಿಣ ಆಫ್ರಿಕಾ ಸತ್ಯಾಗ್ರಹ ಯಶಸ್ವಿಯಾಗಲು ಗೋವಾಂತಕರು ಹಾರೈಸಿರುವದಾಗಿ ಬೊಂಬಾಯಿ ವಾರ್ತೆ.

ಂ ಂ

ಪಾಕಿಸ್ತಾನದಲ್ಲಿ ಸಮ್ಮಿಶ್ರ ಸರ್ಕಾರ ಸ್ಥಾಪನೆ ಆಗಬೇಕೆಂದು ಅಲ್ಲಾ ಮಶ್ಕಿಕರಾಚಿಯಲ್ಲಿ ತಿಳಿಸಿದ್ದಾರೆ ಪಾಕಿಸ್ತಾನದ ಜನತೆಗೆ ಸುಖ ಸಿಗದಿದ್ದರೆ ನೇಂ ಕಾರ್ಯಾಚರಣೆ ನಡೆಸುವದಾಗಿ ತಿಳಿಸಿದರು

ಅನ್ನದಾನ

ಅನ್ನವಿಲ್ಲದೆ ಸಂಕಟಪಡುತ್ತಿರುವ ಬಡವರಿಗೆ ತುಮಕೂರಿನಲ್ಲಿ ಮಂಡಿ ವರ್ತಕರು ಅನ್ನದಾನ ಮಾಡುತ್ತಿದ್ದಾರೆ.

ಲಕ್ಷ ರೂ. ನಷ್ಟ

ಕೇಂದ್ರ ಬೊಂಬಾಯಿನಲ್ಲಿನ ಭಾರತ ಸರ್ಕಾರದ ಡಾಕ್ಯುಮೆಂಟರಿ ಫಿಲಂಸ್ ಸಂಗ್ರಹ ಮಾಡಲಾಗಿದ್ದ ಗ್ರಂಥಾಲಯಕ್ಕೆ ಮೊನ್ನೆ ಬೆಂಕಿ ಬಿದ್ದು ಒಂದು ಲಕ್ಷ ರೂ. ನಷ್ಟವಾಗಿದೆ.

ಕ್ಷಾಮ ಪ್ರದೇಶಕ್ಕೆ ನೆಹರು

ಅಕ್ಟೋಬರು ಮೊದಲನೆ ವಾರ ಪಂಡಿತ ನೆಹರು ರಾಯಲಸೀಮಾ ಬರಪೀಡಿತ ಪ್ರದೇಶಗಳಿಗೆ ಭೇಟಿ ಕೊಡುವರು.

ಗೊರಿಲ್ಲಗಳ ಕೊಲೆ

ಹದಿನೆಂಟು ಮಂದಿ ಕಿರುಕಳ್ಳರು ದ್ದ ಮಾಡುವವರನ್ನ ಮಲಯಾ ರಕ್ಷಣಾ ಸೇನೆ 22 ನೇ ತಾ|| ಅದ 4 ದಿವಸಗಳಲ್ಲಿ ಕೊಂದಿವೆಯೆಂದು ಸಿಂಗಪುರ ವಾರ್ತೆ ತಿಳಿಸುತ್ತದೆ.

ಬೆಲೆ ಹೆಚ್ಚಿತು

ಕೊಯಮುತ್ತೂರಿನಲ್ಲಿ ಅಕ್ಕಿ ಮೂಟೆಗೆ ರೂ 55 ರಿಂದ ರೂ. 59 ಕ್ಕೆ ಏರಿದೆಯದು.

ಮುಷ್ಕರ ಹೂಡುವದಿಲ್ಲ

ಲಕ್ನೋ ಆಸ್ಪತ್ರೆಗಳಲ್ಲಿನ ವೈದ್ಯರು ಪ.ತ್ತು ಇತರ ಕೆಲಸಗಾರರು ಮುಷ್ಕರ ಮಾಡುವದಿಲ್ಲವೆಂದು ತಿಳಿಸಲಾಗಿದೆ.

ಮರ್ಲ ಹೇಳಿಕೆ

ದಕ್ಷಿಣ ಆಫ್ರಿಕದ ಗೃಹಾಡಳಿತದಲ್ಲಿ ಏಶ್ವಸಂಸ್ಥೆ ಪ್ರವೇಶ ಮಾಡುವದಾದರೆ ಪಿ.ಸಂಸ್ಥೆಯನ್ನು ತ್ಯಜಿಸಿ ಹೊರಬರುವ ಅಧಿಕಾರ ನಮಗಿದೆ ಎಂದು ಪ್ರಧಾನಿ ಮಾರ್ಕ್ ಪ್ರಿಟೋರಿಯಾದಲ್ಲಿ ತಿಳಿಸಿರುವರು.

"ಸತ್ಯವಾದಿ" ಸಂಸ್ಥಾಪಕರಜ್ಞಾಪಕಾರ್ಥ

ಮೈಸೂರು ಅರಮನೆ ಸಿದಸ್ಮೇದಾರರಾಗಿದ್ದ ಶ್ರೀ ಎಂ. ವಿ ಸುಬ್ಬರಾಯರು 1917 ನೇ ಇಸ್ವಿಯಲ್ಲಿ 'ಸತ್ಯವಾದಿ' ಪತ್ರಿಕೆಯನ್ನೂ, ಮುದ್ರಣಾಲಯವನ್ನೂ ಸ್ಥಾಪಿಸಿ, ಸತತ ಹದಿಮೂರು ವರ್ಷ ಈ 'ಸತ್ಯವಾದಿ' ಯನ್ನ ಯಶಸ್ವಿಯಾಗಿ ನಡೆಸಿ ಲೋಕಪ್ರಿಯವನ್ನಾಗಿ ಮಾಡಿದರು 1930 ನೆಯ ಇಸ್ವಿಯಲ್ಲಿ ಈ ಪತ್ರಿಕಾ ನಿರ್ವಹಣ ಭಾರವನ್ನು ನಮ್ಮ ಮೇಲೆ ಬಿಟ್ಟು ಪರಂಧಾಮವನ್ನ ಸೇರಿದರು ನಾಳೆ ಆ ಪವಿತ್ರಾತ್ಮರು ಶಿವಸಾಯುಜ್ಯವನ್ನು ಸೇರಿದ ಪುಣ್ಯ ದಿನ ಆ ಪುಣ್ಯ ಪುರುಷರ ಜ್ಞಾಪಕಾರ್ಥವಾಗಿ ನಾಳೆಯ ದಿನ 'ಸತ್ಯವಾದಿ' ಯ ಕಾರ್ಯಾಲಯಕ್ಕೆ ರಜಾ ಕೊಟ್ಟಿದೆ

ಅನಾವರಣ

ಲ್ಯಾಂಸ್‌ಡೌನ್ ಬಿಲ್ಡಿಂಗ್ಸ್ ಸಮೀಪ ವಿರುವ ಸುಂದರವಾದ ಮಂಟಪದಲ್ಲಿ ದಿವಂಗತ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರವರ ಅವ್ಯತಶಿಲಾ ಪ್ರತಿಮೆಯನ್ನು ಸ್ಥಾಪಿಸಲಾಗಿದೆ, ಪ್ರತಿಮೆ ಅನಾವರಣ ಮುಂದಿನ ತಿಂಗಳು ಮೊದಲ ವಾರ ನೆರವೇರಿಸಲು ಸಂ' ಎಂ. ವಿಶ್ವೇಶ್ವರಯ್ಯನವರನ್ನು ಆಹ್ವಾನಿಸಲಾಗಿದೆಯೆಂದು ತಿಳಿದುಬಂದಿದೆ.

— —

ಸರ್ಕಾರ, ಸದಸ್ಯರ ಪ್ರಶ್ನೆಗಳಿಗೆ ಉತ್ತರ ಕೊಡುವದು ನಿರಾಸವಾಗುವದು ಹಕ್ಕುಬಾಧ್ಯತೆಗೆ ಲೋಪವೆಂಬ ಪ್ರಶ್ನೆ ಉತ್ತರ ಪ್ರದೇಶ ಶಾಸನ ಸಭೆ ಅಧ್ಯಕ್ಷರವರ ಪರಿಶೀಲನೆಯಲ್ಲಿದೆ.

ಂ ಂ

ದಕ್ಷಿಣ ಇರಾಕ್ ಗಡಿಯಲ್ಲಿ ಬ್ರಿಟಿಷ ಸೇನೆ ಠಾಣ್ಯ ಮಾಡಿದೆ

ಅಮೂಲ್ಯ ಸಮಯ

(ಪ್ರಭಾವತಿಬಾಯಿಯವರಿಂದ)

ಪ್ರತಿಯೊಬ್ಬನ ಜೀವನದಲ್ಲಿಯೂ ಕೆಲವು ವಿಶೇಷ ರೂಪಗಳಾದ ಸಮಯಗಳು ಬರುತ್ತಿರುತ್ತವೆ : ಅದೃಷ್ಟದ ಪ್ರಾಪ್ತಿ ಮತ್ತು ಅಪ್ರಾಪ್ತಿಗಳು ಅವುಗಳ ಮೇಲೆ ನಿರ್ಭರವಾಗಿರುತ್ತವೆ : ನಮ್ಮ ಮನಸ್ಸು ಸ್ವಲ್ಪವಾದರೂ ಚಲಾಯಮಾನವಾದಲ್ಲಿ ಅಥವಾ ಹಿಂದಕ್ಕೆ ಸರಿದಲ್ಲಿ ಎಲ್ಲವೂ ಮಾಯವಾಗಿ ಹೋಗುತ್ತವೆ.

ಅನೇಕರು ಇಂದು ಮಾಡುವ ಕೆಲಸವನ್ನು ನಾಳೆಗೆ ವಾಯಿದೆ ಹಾಕುವುದರಿಂದ ಅವಶ ಹಿಂದೆ ಬಿದ್ದುಹೋಗಿರುವರು ; ಐದು ನಿಮಿಷಗಳ ಅಲಸ್ಯವಾಗುವುದರಿಂದಲೇ ಅನೇಕರು ಜಯಿಸಲ್ಪಟ್ಟರು. ಹೀಗಿರುವಾಗ ಜೀವನ ಯಾತ್ರೆಯು ಇದಕ್ಕಿಂತಾ ಕಷ್ಟವಾದುದಲ್ಲವೆ ?

ನಾಳೆ ಅನ್ನುವದು ಸೈತಾನನ ಸೇವಕಿಯು ' ನಾಳೆ ' ಎಂಬ ಕತ್ತಿಯ ಹರಿತವಾದ ಮೊನೆಯಿಂದ ಎಂಥಾ ಪ್ರತಿಭಾಶಾಲಿಗಳಾದವರ ಕಶ್ಮಗಳು ಕತ್ತರಿಸಲ್ಪಟ್ಟವೋ ಅದಕ್ಕೆ ಐತಿಹಾಸಿಕ ದೃಷ್ಟಾಂತಗಳು ಅನೇಕವಿವೆ ಎಷ್ಟೋ ಉತ್ತಮ ಸಂಕಲ್ಪಗಳು ಆ ಬಗೆಯಲ್ಲಿಯೇ ಅಸಂಪೂರ್ಣಗಳಾಗಿ ನಿಂತ್ತು ಹೋಗಿವೆ. ಎಷ್ಟೋ ಮಂದಿ ಪಶ್ಚಾತ್ತಾಪಗ್ರಸ್ಥರಾಗಿ ಕೈಗಳನ್ನು ಹಿಸುಕಿಕೊಳ್ಳುತ್ತಾ ನಿಂತು ಹೋಗಿರುವರು. ' ನಾಳೆ ' ಯೆನ್ನುವದು ಅಸಮರ್ಥತೆಯು ಅಲಸ್ಯದ ಕುರುಹು ಆಗಿದೆ.

ಚುರುಕಾಗಿ ಕೆಲಸ ಮಾಡುವದರಿಂದ ವಿಶ್ವಾಸವು ಜನಿಸುತ್ತದೆ ನಮ್ಮ ಕಾರ್ಯಕಲಾಪಗಳೆಲ್ಲವೂ ಸಕ್ರಮವಾಗಿ ನಡೆಯುತ್ತಿರುವುವೆಂಬುದಕ್ಕೆ ಇದು ಒಂದು ಪ್ರತ್ಯಕ್ಷ ಪ್ರಮಾಣವಾಗಿವೆ ಇದರಿಂದ ನಮ್ಮ ಕಾರ್ಯಶಕ್ತಿಯ ವಿಷಯದಲ್ಲಿ ಜನಗಳಿಗೆ ನಂಬಿಕೆಯುಂಟಾಗುತ್ತದೆ ಆದುದರಿಂದ ಯಾವ ಮನುಷ್ಯನು ನಿಯಮಿತನಾಗಿ ಮಾತಿಗೆ ಕಟ್ಟುಬಿದ್ದು ಕೆಲಸ ಮಾಡುವದೋ ಅಂಥವನನ್ನು ಎಲ್ಲರೂ ನಂಬುತ್ತಾರೆ

ರೈಲು ನಡಿಸುವವನ ಗಡಿಯಾರವು ಹಿಂದಕ್ಕೆ ಹೋಗಿದ್ದಲ್ಲಿ, ಒಂದು ರೈಲು ಮತ್ತೊಂದು ರೈಲಿನೊಂದಿಗೆ ಡಿಕ್ಕಿ ಹೊಡೆಯುವ ಸಂಭವವಿರುತ್ತದೆ. ಅನೇಕ ಅಮೂಲ್ಯ ಜೀವನಗಳು ನಷ್ಟವಾಗುವುದಲ್ಲದೆ ಅಪಾರವಾದ ನಷ್ಟವುಂಟಾಗುವ ಸಂಭವವಿದೆ. ಒಬ್ಬ ಏಜೆಂಟು ಸಕಾಲದಲ್ಲಿ ಹಣವನ್ನು ಕಳುಹಿಸದೆ ಹೋದಲ್ಲಿ ವ್ಯಾಪಾರಿಯು ದಿವಾಳಿಯೇಳುವುದು ನಿಶ್ಚಯವು. ಒಬ್ಬ ಸೇವಕನು ಕಾಗದವನ್ನು ಸರಿಯಾದ ಸಮಯದಲ್ಲಿ ತಲುಪಿಸದೆ ಹೋದಲ್ಲಿ ಒಬ್ಬ ನಿರಪರಾಧಿ ವ್ಯಕ್ತಿಗಲ್ಲಿಗೆ ಏರಿಸಲ್ಪಡುವದು ಒಬ್ಬ ಮನುಷ್ಯನು ವ್ಯರ್ಥ ಭಾಷಣೆಯಲ್ಲಿಯೋ ಅಥವಾ ಕಥೆಗಳನ್ನು ಕೇಳುವಿಕೆಯಲ್ಲಿಯೋ 4–5 ನಿಮಿಷಗಳನ್ನು ಕಳೆದಲ್ಲಿ ರೈಲು ಹೊರಟ ಹೋಗಿರಬಹುದಾದುದರಿಂದ ದುಃಖಿಸಬೇಕಾಗುತ್ತದೆ.

ಕೆಲವು ನಿಮಿಷಗಳ ಅಲಸ್ಯವು ಎಷ್ಟೋ ಮಂದಿಯನ್ನು ನಿರಾಶಾಪರರಾಗಿ ಮಾಡಿರುವುದಿಲ್ಲವೇ ! ನಗುತ್ತಿರುವವನನ್ನು ಅಳುವಂತೆ ಮಾಡಿರುವುದಿಲ್ಲವೆ ! ಆದರಿಂದ ನಿಮಿಷಗಳ ಬೆಲೆ ಏನೆಂಬ ವಿಷಯವನ್ನು ವಾಚಕರು ಜಾಗರೂಕರಾಗಿ ಗ್ರಹಿಸಬೇಕೆಂದು ಪ್ರಾರ್ಥಿಸುತ್ತೇನೆ. (ತ್ರಿ)

ಈ ವರ್ಷ ದೇಶದಾದ್ಯಂತ ಸಂಗ್ರಹವಾಗಿರುವ ಗೋಧಿ 788300 ಟನ್ನುಗಳು ಹೋದಬಾರಿಗಿಂತ ಈ ಬಾರಿ 1 ಲಕ್ಷ ಟನ್ ಹೆಚ್ಚು ಸಂಗ್ರಹವಾಗಿದೆ.

ಸೋಷಲಿಸ್ಟ ವಾಮಪಕ್ಷಿಯರು ಬೊಂಬಾಯಿಸಲ್ಲಿ ಹೇಳಿಕೆಯಿತ್ತು ಸೋಷಲಿಸ್ಟ-ಕೆ. ಎಂ. ಪಿ. ಒಪ್ಪಂದ ಅಮಗವಾದತನದ್ದೆಂದಿರುವರು.

ಇನ್ಯಾಹ ಸನಿಹದ ಅಜ್ಞಾದಲ್ಲಿ ಮೊನ್ನೆ ಜಮೀಂದಾರರ ಕಡೆಯವರಿಗೂ ರೈತರಿಗೂ ಹೊಡೆದಾಟವಾಯಿತೆಂದು ಟೆಹರಾನಿಗೆ ವಾರ್ತೆ ಬಂದಿದೆ.

ಉಡ್‌ಲ್ಯಾಂಡ್ 19–9–52 ರಿಂದ

— ದಸರಾ ಹಬ್ಬದ ಪ್ರಯುಕ್ತ ಸ್ಪೆಷಲ್ ಪ್ರೋಗ್ರಾಂ —

ರಾಮಜನ್ಮ Rama Janma

ಪಾತ್ರ— ನಿರೂಪರಾಯ್, ತ್ರಿಲೋಕ ಕಪೂರ್, ರತಂಸಿಂಗ್

ಹೃದಯಂಗಮವಾದ ಪೌರಾಣೀಕ ಹಿಂದಿ ಚಿತ್ರ

ಪ್ರತಿದಿನ 3 ಪ್ರದರ್ಶನಗಳು

ಅಪೂರ್ವ 26–9–52 ರಿಂದ

ಕಲಾಣಂ ಪಣ್ಣಿಪಾರ್ [ತಮಿಳು]

ಪಾತ್ರ— ಎಸ್. ಟಿ ರಾಮರಾವ್, ಜಿ. ವರಲಕ್ಷ್ಮಿ, ಸಾವಿತ್ರಿ [ದಿನ 3 ಆಟಗಳು

ಈ ದಿವಸ— ಪುಯಲ್ ಅಥವಾ ಬಿರುಗಾಳಿ

ರಣಜಿತ್ 26–9–52 ರಿಂದ

ನೀಲಂ ಪೆರಿ [ಹಿಂದಿ]

ಪಾತ್ರ— ಗೀತಾಬಾಲಿ, ಸಜ್ಜನ್, ಗೋಪ್ [ದಿನ 3 ಆಟಗಳು

ಈ ದಿವಸ— ಬಡ್‌ನಾಂ

ಸತ್ಯವಾದಿ ದಿನಪತ್ರಿಕೆ For Quality Printing

.... ಚಂದಾ .... L. N. Press

ತಿಂಗಳಿಗೆ ಆರು ಆಣೆ Sivarampet, Mysore



Protect the Cow ಗೋ ಸಂರಕ್ಷಣೆ ಮಾಡಿ

Elite Printers, Sivarampet, Mysore.

Printers of Jobs, Books & Periodicals

Artistic & colour Printing a speciality

Edited, Printed and Published by Dharma Prachara Nirata M. S. Krishna Rao, at the Satyavadi Press, Chamrajpuram Mysore